(೨) ಭಾಲ್ಕಿಯ ಆರಕ್ಷಕ ವೃತ್ತ ನಿರೀಕ್ಷಕರಿಂದ ಮುಗ್ಧ ವ್ಯಕ್ತಿಗಳನ್ನು ಥಳಿಸಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಭಾಲ್ಕಿಯ ಆರಕ್ಷಕ ವೃತ್ತ ನಿರೀಕ್ಷಕರಿಂದ ಮುಗ್ಧ ವ್ಯಕ್ತಿಗಳನ್ನು ಥಳಿಸಿದ ಆಪಾದನೆ ಹಾಗೂ ತದನಂತರ ಸಾರ್ವಜನಿಕರು ನಡೆಸಿದ ಆಂಧೋಲನದ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—ದಿನಾಂಕ ೨-೭-೧೯೮೫ರಂದು ಸಂಜಾರು ರಾತ್ರಿ ೧೦-೩೦ ಘಂಟೆಯ ಸಮಯದಲ್ಲಿ ಭಾಲ್ಕಿ ಪೋಲೀಸ್ ಠಾಣೆಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಿಗೆ ಭಾಲ್ಕಿ ಟೌನ್ ಗಂಜ್ ಮಾರ್ಕೆಟ್ ಬಳಿ ಎರಡು ಪಂಗಡಗಳಿಗೆ ಘರ್ಷಣೆ ಆಗುತ್ತಿದೆ ಎಂದು ಸುದ್ದಿ ಬಂತು. ಆಗ ಸಬ್ ಇನ್ಸ್‌ಪೆಕ್ಟರ್‌ರವರು ಅವರ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿದರು. ಆಲ್ಲಿ ನೆರೆದಿದ್ದ ಜನರು ಅವರನ್ನು ನೋಡಿ ಅಲ್ಲಿಂದ ಓಡಿ ಹೋದರು. ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿಯವರು ಈ ಕೆಳಕಂಡ ಗಾಯಗೊಂಡ ೧೨ ಜನರನ್ನು ಪೋಲೀಸ್ ಠಾಣೆಗೆ ಕರೆತಂದರು. (೧) ಶ್ರೀ ಚಂದ್ರಪ್ಪ ವಾಂಕೆಯವರ ಮಗ ಕಂಟಪ್ಪ ವಾಂಕ್ (೨) ಕಂಟಪ್ಪ ವಾಂಕೆಯವರ ಮಗ ಬಾಬು (೩) ರಾಜಶೇಖರ್ ಸುಂಟೆ (೪) ಬಂಡಪ್ಪ ತಾಪಿಯಾನ್‌ಯವರ ಮಗ ಶಿವರಾಜ್ (೫) ವಿಕ್‌ನಾಪ್ ಮಜೀನ್‌ಲಾಲ್‌ರವರ ಮಗ ಪಾಂಡು (೬) ಜ್ಞಾನಲೋಬ ಮಾಸತರವರ ಮಗ ಗೋವಿಂದ (೭) ಕಾಷಪ್ಪ ಮಣಕಾರ್‌ಯವರ ಮಗ ಪ್ರಭು (೮) ಪಾಷ್ಯಯಾನ್‌ರವರ ಮಗ ಮೆಹತಾಬ್ (೯) ರಾಮಜಿ ಇವರ ಮಗ ಶರಣಪ್ಪ (೧೦) ತೊಂಡಬರವರ ಮಗ ರಾಮು ಮತ್ತು (೧೧) ನಾರಾಯಣರಾವ್‌ರವರ ಮಗ ದೇವರಾಜ್ (೧೨) ನಂಡಿರಸರವರ ಮಗ ಸತ್ಯಾರ್ಮಿಯನ್, ಸಬ್ ಇನ್ಸ್‌ಪೆಕ್ಟರ್‌ರವರು, ಕಂಟಪ್ಪ ವಾಂಕೆಯವರ ಹೇಳಿಕೆಯನ್ನು ಪಡೆದು ಅಪರಾಧ ಸಂಖ್ಯೆ ೧೧೮/೮೫, ಭಾರತ ದಂಡ ಸಂಹಿತೆ ಕಲಂ ೧೪೭, ೧೪೮, ೩೨೪ ಮತ್ತು ೧೪೯ರ ಪ್ರಕಾರ ರಾಜಶೇಖರ ಸಂಂಟೆ ಮತ್ತು ೧೪ ಜನ ಇತರರ ಮೇಲೆ ಮೊಕದ್ದಮೆ ದಾಖಲು ಮಾಡಿಕೊಂಡರು. ರಾಜಶೇಖರ ಸಂಂಟೆ ಇವರು ಕೊಟ್ಟ ದೂರಿನ ಮೇಲೆ ಪ್ರತಿ ಮೊಕದ್ದಮೆಯನ್ನು ಕಂಟಪ್ಪ ವಾಂಕ್ ಮತ್ತು ೩ ಜನ ಇತರರ ಮೇಲೆ ಭಾಲ್ಕಿ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೧೧೯/೮೫, ಭಾರತ ದಂಡ ಸಂಹಿತೆ ೩೨೪, ಕಲಂ ೩೪ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಲಾಯಿತು. ತನಿಖೆಯ ಸಮಯದಲ್ಲಿ ಕ್ರಮಾಂಕ ೪ ರಿಂದ ೧೧ರವರೆಗೆ ಸೂಚಿಸಿರುವ ಗಾಯಗೊಂಡವರ ಹೇಳಿಕೆಯ ಪ್ರಕಾರ ತಾವು ಎರಡು ಪಂಗಡಗಳನ್ನು ಪ್ರತ್ಯೇಕಿಸುವುದಕ್ಕೆ ಪ್ರಯತ್ನಪಟ್ಟಾಗ ಗಾಯಗಳು ಆದವೆಂದು ತಿಳಿದುಬಂದಿದೆ. ಗಾಯಗೊಂಡ ಎಲ್ಲಾ ಜನರನ್ನು ಭಾಲ್ಕಿಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿಕೊಡಲಾಯಿತು. ಫಿರ್ಯಾದುದಾರರಿಗೂ ಮತ್ತು ಪ್ರತಿ ಫಿರ್ಯಾದುದಾರರ ಸಹೋದರರಿಗೂ ಹಣಕಾಸಿನ ವಿಷಯದಲ್ಲಿ ಘರ್ಷಣೆ ಉಂಟಾಯಿತೆಂದು ತನಿಖೆಯ ಸಮಯದಲ್ಲಿ ತಿಳಿದು ಬಂದಿದೆ.

೨. ಎರಡೂ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿಯನ್ನು ಭಾಲ್ಕಿ ಜೆ.ಎಂ.ಎಫ್.ಸಿ. ಕೋರ್ಟ್‌ನಲ್ಲಿ ಸಲ್ಲಿಸಲಾಗಿದೆ. ಮತ್ತು ಅವು ವಿಚಾರಣೆಯಲ್ಲಿವೆ. ಸಮಾಜ ಸುಧಾರಕರಾದ ಶ್ರೀ ಸುಧಾಕರ ದೇಶಪಾಂಡೆಯವರು ಸಲ್ಲಿಸಿದ ಅರ್ಜಿಯ ಮೇರೆಗೆ ಭಾಲ್ಕಿಯ ಆರಕ್ಷಕ ಉಪ ಅಧೀಕ್ಷಕರವರು ಖುದ್ದಾಗಿ ವಿಚಾರಣೆ ಮಾಡಿದಾಗ ಕೆಲವು ಗಾಯಗೊಂಡ ವ್ಯಕ್ತಿಗಳು ಇವರನ್ನು ಭೇಟಿ ಮಾಡಿ ಭಾಲ್ಕಿಯ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಹಬೂಬ್ ದೌಲರವರ ವಿರುದ್ಧ ಶ್ರೀ ಸುಧಾಕರ್‌ರವರು ಭಾಲ್ಕಿಯಾ ಬಂದ್‌ಗೆ ಕರೆ ಕೊಡಬೇಕೆಂದೂ ಮತ್ತು ಮೆರವಣಿಗೆ ನಡೆಸಬೇಕೆಂಬ ಉದ್ದೇಶ ವಿರಿಸಿಕೊಂಡಿದ್ದರೆಂದು. ಗಾಯಗೊಂಡ ವ್ಯಕ್ತಿಗಳನ್ನು ಭಾಲ್ಕಿಯ ಚೌಬಾರ ಬಳಿ ಕರೆಸಿ ಶ್ರೀ ಸುಧಾಕರಾರವರು ಉದ್ರೇಕಕಾರಿ ಭಾಷಣ ಮಾಡಿ ಸಾರ್ವಜನಿಕರನ್ನು ಪ್ರಚೋದಿಸಿದರು. ಮತ್ತು ಅಂಗಡಿಗಳನ್ನು ಬಲಾತ್ಕಾರವಾಗಿ ಮಂಚ್ಜಿಸಿ ವರ್ತಕರಿಂದ ಹಣ ವಸೂಲಿ ಮಾಡತೊಡಗಿದರು. ಈ ವಿಷಯವನ್ನು ತಿಳಿದ ಬಾಲ್ಕಿಯ ಇನ್ಸ್‌ಪೆಕ್ಟರ್‌ರವರು ಚೌಬಾರ ವೃತ್ತಕ್ಕೆ ಹೋಗಿ ಶ್ರೀ ಸುಧಾಕರ್‌ರವರನ್ನು ಕರ್ನಾಟಕ ಪೋಲೀಸ್ ಕಾಯಿದೆಯ ಕಲಂ ೬೫ರ ಪ್ರಕಾರ ಪೋಲೀಸ್ ವಶಕ್ಕೆ ತೆಗೆದುಕೊಂಡು ಪೋಲೀಸ್ ಠಾಣೆಗೆ ಕರೆ ತಂದರು. ಇದನ್ನು ನೋಡಿದ ಶ್ರೀ ಸುಧಾಕರ್‌ರವರ ಕೆಲವು ಅನುಯಾಯಿಗಳು ಮತ್ತು ಕೆಲವು ಶಾಲಾ ಮಕ್ಕಳು ಪೋಲೀಸ್ ಠಾಣೆ ಮುಂದೆ ಸೇರಿ ಅವರನ್ನು ಬಿಡುಗಡೆ ಮಾಡುವಂತೆ ಘೋಷಣೆ ಕೂಗಲು ಆರಂಭಿಸಿದರು. ಅವರ ವಿರುದ್ಧ ಕರ್ನಾಟಕ ಪೋಲೀಸ್ ಕಾಯಿದೆ ೬೨(೧)(ಆರ್) ಮೇರೆಗೆ ಅಪರಾಧ ಸಂಖ್ಯೆ ೫೧/೮೫ ಗುನ್ನೆಯ ಬಗ್ಗೆ ನೋಟೀಸ್ ನೀಡಿ ಅವರನ್ನು ತಕ್ಷಣ ಬಿಡುಗಡೆ ಮಾಡಲಾಯಿತು.

ಶ್ರೀ. ಈ ದೊಂಬಿ ಘಟನೆಗೆ ಶ್ರೀ ದೇವರಾವ್ ಮತ್ತು ಶ್ರೀ ಪಾಂಡುರವರು ಪ್ರತ್ಯಕ್ಷ ದರ್ಶಿಗಳಾಗಿರುತ್ತಾರೆ. ಅವರ ಹೇಳಿಕೆಯನ್ನು ದಿನಾಂಕ ೩-೭-೧೯೮೫ ರಂದು ತೆಗೆದುಕೊಳ್ಳಲಾಯಿತು. ಅವರ ಹೇಳಿಕೆಯ ಪ್ರಕಾರ ದಿನಾಂಕ ೨-೭-೧೯೮೫ರ ರಾತ್ರಿ ೧೦ ಘಂಟೆ ಸಮಯದಲ್ಲಿ ಅವರು ಗೀತಾಂಜಲಿ ಹೋಟಲ್‌ನಲ್ಲಿ ನಿದ್ರೆ ಮಾಡುತ್ತಿದ್ದಾಗ ಘರ್ಷಣೆಯ ಶಬ್ದವನ್ನು ಕೇಳಿಸಿಕೊಂಡು ಸ್ಥಳಕ್ಕೆ ಧಾವಿಸಿ ಮಧ್ಯ ಪ್ರವೇಶಿಸಿದಾಗ ಅವರು ಗಾಯಗೊಂಡರು. ಅವರನ್ನು ಭಾಲ್ಕಿಯ ಆಸ್ಪತ್ರೆಗೆ ವೈದ್ಯಕೀಯ ಚಿಕಿತ್ಸೆಗಾಗಿ ಕಳುಹಿಸಲಾಯಿತು. ವೈದ್ಯರು ಈ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಮೊಂಡು ವಸ್ತುವಿನಿಂದ ಉಂಟಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಮೇಲ್ಕಂಡ ವಿಷಯಗಳಿಂದ ಭಾಲ್ಕಿಯ ಇನ್ಸ್‌ಪೆಕ್ಟರ್ ಮತ್ತು ಪೋಲೀಸರ ವಿರುದ್ಧ ಇರುವ ಆಪಾದನೆಗಳು ಸತ್ಯಕ್ಕೆ ದೂರವಾದು ವೆಂದು ಕಂಡು ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಅಧ್ಯಕ್ಷರೆ, ಇಲ್ಲಿ ನನ್ನ ಪ್ರಶ್ನೆ ಇಷ್ಟೆ, ಎರಡನೆಯ ತಾರೀಖು ರಾತ್ರಿ ೧೦-೩೦ಕ್ಕೆ ಭಾಲ್ಕಿಯ ಗೀತಾಂಜಲಿ ಹೋಟೆಲ್ ಹತ್ತಿರ ಗಲಾಟೆ ಆಯಿತು.. ಎಂದು ಹೇಳಿದ್ದಾರೆ, ಕೆಲವರನ್ನು ಅರೆಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ, ಹೋಟೆಲಿನ ಒಳಗಡೆ ಮಲಗಿದ್ದ ಪಾಂಡು, ಮಾಣಿ ಅಡುಗೆಭಟ್ಟ, ದೇವರಾವ್ ವಾಚ್ ಮೆಕಾನಿಕ್ ಮತ್ತಿತ್ಯರು ಯಾರಾರಿದ್ದರೋ ಅವರೆನ್ನೆಲ್ಲಾ ಹೊರಗಡೆ ಎಳೆದುಕೊಂಡು ಬಂದು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಹೊಡೆದಿದ್ದಾರೆ. ಬೆಲ್ಟ್ ಮತ್ತು ಲಾಠಿಯಿಂದ ಹೊಡೆದಂಥ ಗುರುತು ಬಿದ್ದಿದೆ. ವಾಚ್ ಮೆಕಾನಿಕ್ ತಲೆಗೆ ಹೊಡೆದಿದ್ದಾರೆ. ಎರಡನೇ ತಾರೀಖು ಅರೆಸ್ಟ್ ಮಾಡಿದವರು ಮೂರನೆಯ ತಾರೀಖು ಯಾರಿಗೂ ತಿಳಿಸಬಾರದು ಎಂದು ಹೇಳಿ. ಅವರನ್ನು ಬಿಟ್ಟಿದ್ದಾರೆ. ಸುಧಾಕರ್ ಎನ್ನುವವರಿಗೆ ಈ ರೀತಿ ಅವರು ತಿಳಿಸಿದರು. ಆಗ ಅವರು ಏಟು ಬಿದ್ದಂತಹವರನ್ನು ಕರೆದುಕೊಂಡು ಎಸ್. ಪಿ. ಹತ್ತಿರ ಹೋಗಿ ಏಟು ಬಿದ್ದುದನ್ನು ತೋರಿಸುತ್ತಿದ್ದಾಗ, ಇದೇ ಸರ್ಕಲ್ ಇನ್ಸ್‌ಪೆಕ್ಟರ್, ಎಂದು ಗುರುತು ಹಿಡಿದು ತೋರಿಸಿದ್ದಾರೆ. ಇವರು ವರ್ತಕರಿಂದ ಹಣ ಸಂಗ್ರಹಿಸುತ್ತಿದ್ದಾರೆಂದು, ಮೊದಲನೇ ದಿವಸ ಗಲಾಟೆ ಆದಾಗ ಬಂದ ಮೆಹಬೂಬ್ ದಾಲ್ ಅವರು ಅಲ್ಲಿಗೆ ಬಂದು ಸಮಾಜ ಸುಧಾರಕರಾದ ಸುಧಾಕರ್ ಅವರನ್ನು, ಮತ್ತೆ ಮೂರು ಜನರನ್ನು ಎಲ್ಲರ ಸಮಕ್ಷಮದಲ್ಲಿಯೇ ಹೊಡೆದು, ಹೀನಾಯಮಾನವಾಗಿ ಬೈದು, ಲಾಕಪ್‌ಗೆ ಹಾಕಲಿಕ್ಕೆ ಕರೆದುಕೊಂಡು ಹೋದರು. ಆಗ ಅಲ್ಲಿದ್ದ ಎಲ್ಲಾ ೪೦೦-೫೦೦ ಜನರು ಮತ್ತು ವಿದ್ಯಾರ್ಥಿಗಳು ಪೋಲೀಸ್ ಸ್ಟೇಷನ್‌ಗೆ ಬಂದು ಸರ್ಕಲ್ ಇನ್ಸ್‌ಪೆಕ್ಟರ್ ವಿರುದ್ಧ ಘೋಷಣೆ ಕೂಗುತ್ತಾ ಅವರನ್ನು ಬಿಡುಗಡೆ ಮಾಡಲಿಕ್ಕೆ ಕೂಗುತ್ತಿದ್ದರು.

೧-೩೦ ಪಿ. ಎಂ.

ಸರ್ಕಲ್ ಇನ್ಸ್‌ಪೆಕ್ಟರ್ ತಮ್ಮ ತಪ್ಪನ್ನು ಒಪ್ಪಿಕೊಂಡು, ನಾನು ಕರೆದುಕೊಂಡು ಬಂದು ಮಿಸ್ಟೇಕ್ ಮಾಡಿದೆ ಅವರನ್ನು ಅರೆಸ್ಟ್ ಮಾಡಿಲ್ಲ ಎಂದು ಹೇಳಿದ್ದಾರೆ, ಎಸ್.ಪಿ. ಹತ್ತಿರ ಕರೆದುಕೊಂಡು ಹೋಗಿ ಎಂದು ಹೇಳಿದಾಗ ಇಲ್ಲ ಎಂದು ಹೇಳಿದ್ದಕ್ಕೆ ಪ್ರೊಟೆಕ್ಟ್ ಮಾಡಿದ್ದಾರೆ. ಳನೇ ತಾರೀಖಿನ ದಿವಸ ಏನೇನು ನಡೆಯಿತು ಅದರ ವಿವರಣೆ ಕೂಡ ಕೊಡಲಾಗಿದೆ. ಆ ವ್ಯಕ್ತಿಯನ್ನು ಬೆದರಿಸಿ, ಸುಳ್ಳು ಮೊಕ್ಕದ್ದಮೆಗಳನ್ನು ಹಾಕಿಸಿದ್ದಾರೆ. ಎಸ್ ಪಿ.ಯವರನ್ನು ಕಂಡು ಈ ಎಲ್ಲ ವಿಷಯುಗಳನ್ನು, ಅವರಿಗೆ ತಿಳಿಸಿದಮೇಲೆ ಅವರು ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಕಳುಹಿಸಿದ್ದಾರೆ. ಎಸ್.ಪಿ.ಯವರನ್ನು ನೋಡಿದ ಏಂಬ ಒಂದೇ ಒಂದು ಕಾರಣಕ್ಕಾಗಿ ಸುಳ್ಳು ಮೊಕ್ಕದ್ದಮೆ ಹಾಕತಕ್ಕಂಥಾದ್ದು ಮತ್ತು ಪ್ರಾಣ ಭಯ ಹುಟ್ಟಿಸಿರತಕ್ಕಂಥಾದ್ದು ಮಾಡಿದ್ದರಿಂದ ಅಮರಣಾಂತ ಉಪವಾಸ ಮಾಡುವುದಾಗಿ ತಿಳಿಸಿದ್ದು ೧೬ನೇ ತಾರೀಖಿನ ಹಿಂದೂ ಪತ್ರಿಕೆಯಲ್ಲಿ ಕೂಡ ಬಂದಿದೆ. ಈ ವಿಷಯು 'ಗಮನೆ' ಎನ್ನುವ ಹಿಂದೀ ಪತ್ರಿಕೆಯಲ್ಲಿ ಕೂಡ ಬಂದಿದೆ. ಪೋಲೀಸಿನವರಿಂದ ಇಂಥ ಘಟನೆಗಳು ನಡೆದಾಗ, ಪ್ರತಿಭಟನೆ ಮಾಡುವುದಕ್ಕೆ ಹೋದರೆ, ಅವರ ವಿರುದ್ಧವೇ ಸುಳ್ಳು ಮೊಕದ್ದಮೆಗಳನ್ನು ಹಾಕಿ, ಕೇಸುಗಳನ್ನು ಹಾಕುವಂಥ ವ್ಯವಸ್ಥೆ ಅಲ್ಲಿ ನಡೆಯುತ್ತಿದೆ, ಅಲ್ಲಿ ಬಯಕರು ಮಂಥ ಸ್ಥಿತಿಯಲ್ಲಿ ಅವರು ಇಲ್ಲ ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕಕ. ಇನ್ನು ಸರ್ಕಲ್ ಇನ್‌ಪೆಕ್ಟರ್ ಮೇಲೆ ಸಾಕಷ್ಟು ದೂರುಗಳು ಇವೆ ಅವರನ್ನು 'ಬೇರೆ ಕಡೆ ವರ್ಗ ಮಾಡಿ. ಇಲ್ಲವಾದರೆ ಸೂಕ್ತ ರೀತಿಯಲ್ಲಿ ನ್ಯಾಯ ದೊರಕಿಸಿಕೊಡುವುದಕ್ಕೆ ಆದೇಶ ನೀಡಿ. ಸುಧಾಕರ್‌ರವರಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಬೀದರ್ ಜಿಲ್ಲೆಯ ಆರಕ್ಷಕ ನಿರ್ದೇಶಕರ ವರದಿಯಂತೆ, ಸುಧಾಕರ್‌ರವರು ಆರ್.ಎಸ್.ಎಸ್. ಕಾರ್ಯಕರ್ತರಾಗಿದ್ದು, ಸ್ಥಳೀಯ ಅಧಿಕಾರಿ ಬಿ.ಡಿ.ಓ. ಅವರನ್ನು ಅವರ ಕಛೇರಿಯಿಂದ ಹೊರಗೆ ಎಳೆದುಕೊಂಡು ಬಂದು, ಅವರ ಕೊರಳಿಗೆ ಚಪ್ಪಲಿ ಹಾಕಿದ ಘಟನೆಗೆ ಸಂಬಂಧಪಟ್ಟಂತೆ ಅವರ ಮೇಲೆ ಕೇಸು ದಾಖಲಾಗಿದೆ. ಅದನ್ನು ರಿಜಿಸ್ಟರ್ ಕೂಡ ದಾಖಲು ಮಾಡಿಕೊಂಡಿದ್ದಾರೆ ಕೇಸು ಕೋರ್ಟ್‌ನಲ್ಲಿ ನಡೆಯುತ್ತಿದೆ. ಸುಧಾಕರ್‌ರವರು ಒಳ್ಳೆಯ ವ್ಯಕ್ತಿಯೆಂದು ಯಡಿಯೂರಪ್ಪನವರು ಹೇಳುತ್ತಿದ್ದಾರೆ. ಪೋಲೀಸ್ ನಿರ್ದೇಶಕರು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ. ಇವತ್ತು ಜನರನ್ನು ಹೊಡೆದು ಬಡಿಯುತಕ್ಕ ಅಗತ್ಯ ಇಲ್ಲ. ನವೀನ ರೀತಿಯಲ್ಲಿ ವಿಚಾರಣೆ ಮಾಡುವುದು ಒಳ್ಳೆಯದೆಂದು ಸೂಚನೆ ಕೊಡಲಾಗಿದೆ. ಸುಧಾಕರ್ ಮತ್ತು ಅವರ ಅನುಯಾಯಿಗಳು ಬಿ.ಡಿ.ಓ. ತಪ್ಪು ಮಾಡಿದ್ದಾರೆಂದು ಚಪ್ಪಲಿ ಹಾರ ಹಾಕಿದ್ದರ ಬಗ್ಗೆ ವರದಿ ಕೂಡ ಬಂದಿದೆ. ಯಾರೇ ಆಗಲೀ ಕಾನೂನನ್ನು ಕೈಗೆತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಿ.ಡಿ.ಓ. ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಸಂಬಂಧಪಟ್ಟವರಿಗೆ ಬರೆದು ಶಿಕ್ಷೆ ಮಾಡಿಸತಕ್ಕಂಥಾದ್ದು ಧರ್ಮ ಅದನ್ನು ಬಿಟ್ಟು ಕಾನೂನನ್ನ ಕೈಗೆ ತೆಗೆದುಕೊಂಡರೆ ಒಂದಲ್ಲ ಒಂದು ರೀತಿಯಲ್ಲಿ ಇನ್ನೊಂದು ಗುಂಪಿಗೆ ಸಿಕ್ಕಿಕೊಂಡು ತೊಂದರೆ ಪಡಂತ್ತಾರೆ. ನಿರಪರಾಧಿಗಳನ್ನು ಯಾರೂ ಬಡಿದಿಲ್ಲ ಘಟನೆ ನಡೆದ ಸಂದರ್ಭದಲ್ಲಿ ಒಬ್ಬರೊನ್ನಬ್ಬರು ಬೇರ್ಪಡಿಸತಕ್ಕ ಸಂದರ್ಭದಲ್ಲಿ ಇದು ನಡೆದಿದೆ. ಸತ್ಯಾಂಶ ಏನು ಎನ್ನುವುದನ್ನು ತಿಳಿದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಡಿ.ಐ.ಜಿ.ಯವರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಮಾನ್ಯ ಗೃಹ ಸಚಿವರ ಬಗ್ಗೆ ನನಗೆ ಬಹಳ ಗೌರವ ಇದೆ. ದಯವಿಟ್ಟು ಪೋಲೀಸ್ ಅಧಿಕಾರಿಗಳು ಕಳುಹಿಸತಕ್ಕ ಹೇಳಿಕೆಗಳನ್ನು ನಂಬಬೇಡಿ. ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿ ಬಿ.ಡಿ ಓ. ಘಟನೆ ನಡೆದಿದ್ದರೆ, ಸುಧಾಕರ್‌ರವರು ಪ್ರವೇಶ ಮಾಡಿದ್ದರೆ, ಅವರ ಮೇಲೆ ಆರೋಪ ಇದ್ದರೆ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೋಳ್ಳಿ, ಸುಧಾಕರ್‌ರವರ ವಿಚಾರದಲ್ಲಿ ಅಲ್ಲಿನ ಜನತೆ ಬಹಳ ಗೌರವ ಇಟ್ಟುಕೊಂಡಿದ್ದಾರೆ ಅನ್ಯಾಯಗಳು ನಡೆದರೆ, ಪೋಲೀಸರಿಂದ ತೊಂದರೆಗಳು ಆದರೆ ಮುಂದೆ ನಿಂತ್ತು ಕೆಲಸ ಮಾಡತಕ್ಕ ಯೋಗ್ಯ ವ್ಯಕ್ತಿ ಅವರು ಬಾಲ್ಯದಲ್ಲಿ ಹೋಟೆಲೊಂದರ ಹತ್ತಿರ ನಡೆದಂಥ ಘಟನೆಯ ಬಗ್ಗೆ ಎಸ್.ಪಿ. ಹತ್ತಿರ ಎಲ್ಲವನ್ನೂ ಹೋಗಿ ತಿಳಿಸಿದ್ದಾರೆ. ಅದು ಹಿಂದೂ ಪತ್ರಿಕೆಯಲ್ಲಿ ಬಂದಿದೆ ಎಸ್.ಪಿ ಯವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಡಿ.ವೈ.ಎಸ್.ಪಿ ಯವರಿಗೂ ಕೂಡ ಪತ್ರ ಬರೆದಿದ್ದಾರೆ. ಕ್ರಮ ತೆಗೆದುಕೊಂಡಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ಲಾಠಿ ಚಾರ್ಜ್ ಮಾಡಿದಾಗ ಪ್ರತಿಭಟನೆ ಮಾಡುವಂಥ ಹಕ್ಕು ಇದೆ. ಪ್ರತಿಭಟನೆ ಮಾಡಬಾರದು ಎಂದು ಹೊಡೆದು ಬಡಿಯುವಂಥಾದ್ದು, ಪ್ರತಿ ಭಟನೆ ಮಾಡಿದವರ ವಿರುದ್ಧ ಸುಳ್ಳು ಕೇಸುಗಳನ್ನು ಹಾಕಿಸಿ, ಅವರಿಗೆ ಇಲ್ಲಸಲ್ಲದ ಕಿರುಕುಳಗಳನ್ನು ಕೊಡುವುದು, ಅವರ ಮೇಲೆ ಆರೋಪ ಹೊರಿಸುವುದು ವಿನಾಕಾರಣ ತೊಂದರೆ ಕೊಡತಕ್ಕಂಥ ಕೆಲಸವನ್ನು ಸರ್ಕಲ್ ಇನ್ಸ್‌ಪೆಕ್ಟರ್‌ರವರು ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ಪ್ರಾಮಾಣಿಕ ವ್ಯಕ್ತಿಯಾದ ಸುಧಾಕರ್‌ರವರಿಗೆ ರಕ್ಷಣೆ ಕೊಡುತ್ತೀರಾ ? ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಸೂಕ್ತ ಕ್ರಮ ತಗೆದುಕೊಂಡು ಅವರನ್ನು ಬೇರೆ ಕಡೆಗೆ ವರ್ಗ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ೨೫-೧೧-೮೯ರಲ್ಲಿ ಸುಧಾಕರ್ ಮತ್ತು ಬೆಂಬಲಿಗರು ಭಾಲ್ಕಿ ತಾಲ್ಲೂಕಿನ ಬಿ.ಡಿ.ಓ ಬಸ್ತಿ ಅವರನ್ನು ಕಛೇರಿಯಿಂದ ಹೊರಗೆ ಎಳೆದುಕೊಂಡು ಬಂದು ಹಳೆಯ ಚಪ್ಪಲಿ ಹಾರ ಹಾಕಿದ್ದರು ಎನ್ನುವ ಆಪಾದನೆ ಮೇಲೆ ಅವರ ಮೇಲೆ ಕೇಸು ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಈಸನೂರಿ ಘಟನೆ ವಿಚಾರದ ಬಗ್ಗೆ ರಾಚಯ್ಯ ನವರ ಮನೆ ಹತ್ತಿರ ಆ ಊರಿನಿಂದ ಬಂದಂಥ ಹೆಂಗಸರು ಗಂಡಸರನ್ನು ಒಂದು ವಾರದ ಹಿಂದೆ ಕರೆದುಕೊಂಡು ಹೋಗಿದ್ದೆ. ಶಿಕಾರಿಪುರ ಪೋಲೀಸ್ ಠಾಣೆಯಲ್ಲಿ ನಡೆದಂಥ ಘಟನೆ ಪತ್ರಿಕೆಯಲ್ಲಿ ಕೂಡ ಬಂದಿತು. ಪೋಲೀಸರ ವರ್ತನೆ ಆ ರೀತಿ ಇದೆ. ಇಲ್ಲಿ ವಿನಾಕರಣ ನಿರಪರಾಧಿಯನ್ನು ಹೊಡೆಯುತಕ್ಕ ಅವಶ್ಯಕತೆ ಏನಿತ್ತು ? ಲಾಕಪ್‌ನಲ್ಲಿ ಇಡುವಂಥ ಅವಶ್ಯಕತೆ ಏನಿತ್ತು ? ಹೀಗಾದರೆ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಬಾರದೆ ? ಇಲ್ಲಸಲ್ಲದ ಕೇಸುಗಳನ್ನು ಹಾಕಿದ್ದಾರೆ. ಆಪಾದನೆಗಳನ್ನು ಮಾಡುವ ಸ್ಥಿತಿಗೆ ಅಧಿಕಾರಿಗಳು ಬಂದರೆ ಹೇಗೆ ? ಸುಧಾಕರ್‌ರವರಿಗೆ ರಕ್ಷಣೆ ಕೊಡಿ, ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ರಾಚಯ್ಯ.—ಡಿ.ಐ ಜಿ. ಅವರ ಕಡೆಯಿಂದ **ವಿಚಾರಣೆ** ಮಾಡಿಸಿ ತಪ್ಪಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಇಲ್ಲಿ ನೋಡಿದರೆ ಪೋಲೀಸ್‌ನವರು ಹೊಡೆಯುತ್ತಾರೆಂದು ಹೇಳುತ್ತಾರೆ. ಪೋಲೀಸ್‌ನವರು ಕ್ರಮ ತೆಗೆದುಕೊಂಡರೆ ಏನು ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತಾರೆ. ಪೋಲೀಸ್‌ನವರು ನಿಷ್ಕ್ರಿಯರಾಗವ ಸ್ಥಿತಿಯಲ್ಲಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ವೈಯಕ್ತಿಕವಾಗಿ ಅವನ ಮೇಲೆ ಆರೋಪ ಹೊರಿಸಿ ತೊಂದರೆ ಕೊಡುವುದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ರಕ್ಷಣೆ ಕೊಡತಕ್ಕದ್ದು ಸಾಧುವೆ ಎನ್ನತಕ್ಕದನ್ನು ನೋಡಿ ಅವರಿಗೆ ರಕ್ಷಣೆ ಕೊಡುವ ಬಗ್ಗೆ ನಾನು ನೋಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನೋಡುತ್ತೇನೆಂದರೆ ಏನು ಸ್ವಾಮಿ ? ಈ ತರಹ ಉತ್ತರವನ್ನು ನಾನು ಆಪೇಕ್ಷೆ ಪಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ನಾನು ಅದರ ಬಗ್ಗೆ ಹೇಳಲೇನು ? ಪೋಲೀಸ್ ವರದಿ ಪ್ರಕಾರ ಅವರು ಇನ್ನೊಂದು ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಅದು ವಿಚಾರಣೆಯಲ್ಲಿದೆ.

ಅಧ್ಯಕ್ಷರು —ಮಾನ್ಯ ಸದಸ್ಯರಾದ ಯಡಿಯೂರಪ್ಪನವರೇ ಇದರ ಬಗ್ಗೆ ಪ್ರಶ್ನೆ ಸಾಕು. ಇನ್ನು ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇದು ಕಾಲಿಂಗ್ ಅಟೆನ್‌ಷನ್, ನಿನ್ನೆ ತಾರೀಖು ನಡೆದಂತಹ ಘಟನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ —ಸುಧಾಕರ್‌ಗೂ ಪೋಲೀಸ್‌ನವರಿಗೂ ಏನೂ ಸಂಬಂಧ ಇಲ್ಲದಿದ್ದರೆ, ಸುಧಾಕರ್ ಅವರನ್ನು ಪೋಲೀಸ್ ಲಾಕಪ್‌ನಲ್ಲಿ ಹಾಕಿದಾಗ ಸಾವಿರಾರು ಜನ ಸೇರುವಂತಹ ಸಂದರ್ಭ ಏತಕ್ಕೆ ಬಂತು ? ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯ ಅಲ್ಲವೆ ? ಇವತ್ತು ಅವನು ಬದುಕುವಂತಹ ಸ್ಥಿತಿಯಲ್ಲಿಲ್ಲ. ಪೋಲೀಸ್ ಅಧಿಕಾರಿಗಳು ಸೂಕ್ತ ರಕ್ಷಣೆ ಕೊಡಬೇಕು.

ಅಧ್ಯಕ್ಷರು,—ಸೂಕ್ತ ರಕ್ಷಣೆ ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸಾವಿರಾರು ಜನಗಳ ಎದುರಿನಲ್ಲಿ ಪೋಲಿಸ್ ಸ್ಟೇಶನ್ ಹತ್ತಿರ ಅವಮಾನ ಮಾಡಿದ್ದಾರೆ, ಆದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿದರೆ ಏನು ಮಾಡಬೇಕು? ಪೋಲೀಸ್‌ನವರಿಂದ ಯಾವುದೇ ಸಾರ್ವಜನಿಕ ಸಭೆಯನ್ನು ನಿರ್ಭಯವಾಗಿ ಮಾಡುವ ಹಾಗೆ ಇಲ್ಲ. ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಸೂಪರಿಂಟೆಂಡೆಂಟ್ ಹೇಳಿದ್ದಾರೆ, ಸರ್ಕಲ್ ಇನ್ಸ್‌ಪೆಕ್ಟರ್ ಈ ರೀತಿ ಮಾಡಿದರೆ ಹೇಗೆ?

ಶ್ರೀ ಬಿ. ರಾಚಯ್ಯ.—ಬಂದಿರುವಂತಹ ಉತ್ತರವನ್ನು ಹೇಳುವುದಕ್ಕೆ ಹೋದರೆ ಮಾನ್ಯ ಸದಸ್ಯರು ಅದು ಸರಿಯಲ್ಲವೆಂದು ಹೇಳುತ್ತಾರೆ. ವಿಚಾರಣೆ ನಡೆಸಿ ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಅದರ ಮೇಲೆ ಇನ್ನೇನು ಮಾಡಬೇಕು

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಇದೇನು ಸ್ವಾಮಿ? ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಈ ರೀತಿ ಪಟ್ಟು ಹಿಡಿದರೆ ಹೇಗೆ?

ಶ್ರೀ ಬಿ ಎಸ್. ಯಡಿಯೂರಪ್ಪ.—ತಾವು ಆಡಳಿತ ಪಕ್ಷದಲ್ಲಿದ್ದೀರಿ ತಮಗೆ ನಮ್ಮ ನೋವು ಗೊತ್ತಿಲ್ಲ. ನೀವೇನು ನನಗೆ ಹೇಳುವುದು? ಅಧ್ಯಕ್ಷರಿದ್ದಾರೆ ಅವರು ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ ನಿಮಗೆ ಸಂಬಂಧವಿಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಸಿ.ಎಂ. ರೇವಣಸಿದ್ದಯ್ಯ.—ವಿಷಯ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನನಗೆ ಚೆನ್ನಾಗಿ ಗೊತ್ತು, ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ ಈ ಸದನದಲ್ಲಿ ಯಾರು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಾರೆಂದು ನಾನು ನೋಡುತ್ತಿದ್ದೇನೆ.

ನಿಯಮ 334ರ ಮೇರೆಗೆ